**ದಿಃ 04.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು – ವಾದಿ ಪರ ವಕೀಲರಿಂದ**

2 ನೇ ಬಾರಿ ಆಕೆ ನಮ್ಮ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗಿದ್ದು , ದಿಃ 29.05.2014 ರಂದು. ಬಿಡುಗಡೆ ಹೊಂದಿದ್ದು ದಿಃ 04.06.2014 ರಂದು. ಆಗಲೂ ಸಹ ಆಕೆ Diabetic Keto Acidosis ನಿಂದ ಬಳಲುತ್ತಿದ್ದರು. ನಂತರದಲ್ಲಿ ಆಕೆಗೆ ಚಿಕಿತ್ಸೆ ಕೊಟ್ಟ ನಂತರ ಗುಣಮುಖರಾದರು. ನಿಡಿ 7 ರ ಪ್ರಕಾರ ಆಕೆ ಮಾನಸಿಕವಾಗಿ "confusion" ನಲ್ಲಿ ಇರುತ್ತಿದ್ದರು. ಬಿಡುಗಡೆ ಹೊಂದುವಾಗ ಆಕೆ ಆ ಮಾನಸಿಕ "confusion" ನಿಂದ ಹೊರ ಬಂದಿದ್ದರು. "confusion" ಉಂಟಾಗುವುದು Diabetic Keto Acidosis ಇದ್ದಾಗ ಮತ್ತು Sugar ಕಡಿಮೆಯಾದಾಗ ಅಂದರೆ Hypoglycemia ಇದ್ದಾಗ . ಈಕೆ ಆಸ್ಪತ್ರೆಗೆ ದಾಖಲಾದದ್ದು Diabetic Keto Acidosis ಆಗಿ . ಆಕೆ Hypoglycemia ಆದಾಗಲೂ ಆಸ್ಪತ್ರೆಗೆ ದಾಖಲಾಗಿದ್ದರು. Hypoglycemia ಆದಾಗ Diabetic Keto Acidosis ಇರುವುದಿಲ್ಲ. ಎರಡೂ ಬೇರೆ ಬೇರೆ. Type 2 Diabetic ಬಹಳ ವರ್ಷಗಳಿಂದ ಇರುತ್ತದೆ. ನಿಡಿ 7 ರಲ್ಲಿ ಯಾರು ಆಕೆಯನ್ನು ಆಸ್ಪತ್ರೆಗೆ ಸೇರಿಸಿದ್ದರು ಎನ್ನುವ ಬಗ್ಗೆ ಮಾಹಿತಿ ಇರುವುದಿಲ್ಲ ಎನ್ನುವುದು ಸರಿ. ಬಿ.ಎಂ. ಆಸ್ಪತ್ರೆ ಸಿ.ಬಿ. ಮೂರ್ತಿಯವರ ಅಣ್ಣನ ಆಸ್ಪತ್ರೆ ಎನ್ನುವುದು ಸರಿ . ಆಕೆಯನ್ನು

ಆಸ್ಪತ್ರೆಗೆ ದಾಖಲಿಸಿದಾಗ ಈ ದಾಖಾಲತಿಯನ್ನು ಅಸ್ತಿತ್ವಕ್ಕೆ ತರಲಾಗಿರುತ್ತದೆ. ಆಕೆ ಬಿಡುಗಡೆ ಹೊಂದಿದ ನಂತರ ಅದನ್ನು ರೆಕಾರ್ಡ ರೂಂ ಗೆ ಕಳುಹಿಸಲಾಗುತ್ತದೆ. ನಿಡಿ 6 ಮತ್ತು 7 ರಲ್ಲಿರುವ ಎಲ್ಲಾ ಮಾಹಿತಿಗಳನ್ನು ನಾನು ಹೇಳಿದಂತೆ ನಮ್ಮ ರೆಸಿಡೆಂಟ್ ಡಾಕ್ಟರ್ ಬರೆದಿರುತ್ತಾರೆ. ನಿಡಿ 6 ಮತ್ತು 7 ರಲ್ಲಿರುವ ಮಾಹಿತಿಗಳನ್ನು ಹೊರತು ಪಡಿಸಿ ನನಗೆ ಲೀಲಾವತಿಯವರ ಆರೋಗ್ಯದ ಬಗ್ಗೆ ಯಾವುದೇ ವಿಷಯ ಗೊತ್ತಿರಲಿಲ್ಲ ಎನ್ನುವುದು ಸರಿಯಲ್ಲ. Hypoglycemia ಬಾಬ್ತು ನಿಡಿ 6 ಮತ್ತು 7 ರಲ್ಲಿ ಇರುವುದಿಲ್ಲ ಎನ್ನುವುದು ಸರಿ. ಆಕೆ ಮೃತ ಪಟ್ಟ ದಿನಾಂಕ ನನಗೆ ಗೊತ್ತಿಲ್ಲ. ಮೇಲ್ಕಂಡಂತೆ ಬಳಲುತ್ತಿದ್ದಾಗ ಚಿಕಿತ್ಸೆ ಕೊಟ್ಟ ನಂತರ ಆಕೆ ಗುಣಮುಖರಾಗಿ ಸಾಮಾನ್ಯರಂತೆ ಜೀವನ ನಡೆಸಬಹುದು ಎಂದು ಮಾಡಿದ ಸಲಹೆಗೆ ಸಾಕ್ಷಿ ಡೈಯಾಬಿಟೀಸ್ಸ್ ಕಂಟ್ರೋಲ್ ನಲ್ಲಿದ್ದರೆ ಜೀವನ ನಡೆಸಬಹುದು, ಇಲ್ಲವಾದಲ್ಲಿ ಯಾರದ್ದಾದರು ಸಹಾಯದ ಆವಶ್ಯಕತೆ ಇರುತ್ತದೆ , ಎನ್ನುತ್ತಾರೆ. ಈ ಚಿಕಿತ್ಸೆಯನ್ನು ಪಡೆದ ನಂತರ ಅವರು ಹಾಸಿಗೆಯಲ್ಲೇ ಇರಬೇಕು ಎಂದೇನು ಇಲ್ಲ , ಆದರೆ ಆಕೆಗೆ ಬೇರೆ ಆರೋಗ್ಯದ ಸಮಸ್ಯೆಗಳು ಇದ್ದಲ್ಲಿ ಹಾಸಿಗೆಯಲ್ಲೇ ಇರಬೇಕಾಗುತ್ತದೆ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,